# ಸೂಪರ್ ಮ್ಯಾಮ್ ಸಿಂಡ್ರೋಮ್



‘ಸುಮತಿ ಸೂರ್ಯನನ್ನು ತಡೆದ ಹಾಗೆ, ಅನೂರಾಧ ಕಾಲ ಚಕ್ರವನ್ನೇ ನಿಲ್ಲಿಸಿಬಿಟ್ಟಳಾ,ಹೇಗೆ? ಮಲಗಿದ್ದ ಸೂರ್ಯಾರಾವನಿಗೆ ತಟಕ್ಕನೆ ಎಚ್ಚರವಾಯಿತು.

‘ನಿಂತಿದ್ದು ಕಾಲಚಕ್ರವಲ್ಲ. ಅನೂರಾಧ ಅನ್ನುವ ಹಾಗೆ ಗೋಡೆಯ ಗಡಿಯಾರ ಒಂಭತ್ತು ಬಾರಿಸಿತು. ಅನೂರಾಧ ಮುಂಜಾನೆಯೇ ಎದ್ದು ಅರ್ಧ ಕೆಲಸ ಮುಗಿಸದ ಹೊರತು ಹೊತ್ತು ಮೂಡುವುದೇ ಇಲ್ಲ. ಅಡುಗೆ ಮನೆಗೆ ಎಚ್ಚರ ಆಗುವುದಿಲ್ಲ. ಅಂಗಳದಲ್ಲಿ ರಂಗೋಲಿ ಚಿತ್ತಾರ ಮೂಡುವುದಿಲ್ಲ. ಅಡುಗೆ ಮನೆಗೆ ಶಿಳ್ಳೆ, ಕೊತ ಕೊತ ಕೋಲಾಹಲಗಳಿಂದ ಜೀವ ಬರುವುದಿಲ್ಲ. ಒಂದೇ ಎರಡೇ ಇಡೀ ಲೋಕವೇ ನಿದ್ದೆಯಿಂದ ಎಚ್ಚರಗೊಳ್ಳುವುದಿಲ್ಲ. ಇಂಥಾ ಅನೂರಾಧ ಇನ್ನೂ ಮುಖದ ತನಕ ಹೊದ್ದು ಯಾಕೆ ಮಲಗಿದಳೋ ಸೂರ್ಯಾರಾವನಿಗೆ ಅರ್ಥವಾಗಲಿಲ್ಲ. ಆಕೆ ಬೇಜವಾಬ್ದಾರಿ ಗೃಹಿಣಿ ಅಂತೂ ಅಲ್ಲವೇ ಅಲ್ಲ.

ದಿನಾಲೂ ಮುಂಜಾನೆ ಐದು ಗಂಟೆಗೆ ಎದ್ದು ಬೀದಿಯ ಕೊನೆಯಲ್ಲಿರುವ ಅಂಗಡಿಯವರೆಗೂ ನಡೆದುಕೊಂಡು ಹೋಗಿ ಹಾಲು ತರುತ್ತಾಳೆ. ಹಾಲು ತರುವವನು ಈ ನಡುವೆ ಪ್ಯಾಕೆಟ್ಟಿಗೆ ಹತ್ತು ರೂಪಾಯಿ ಹೆಚ್ಚು ಮಾಡಿದಾಗಿನಿಂದ ಅನೂರಾಧ ಮಾರ್ನಿಂಗ್ ವಾಕು ಶುರು ಮಾಡಿದ್ದಾಳೆ. ತಿಂಗಳಿಗೆ ಇಪ್ಪತ್ತು ರೂಪಾಯಿ ಉಳಿಸುತ್ತಾಳೆ. ಬೆಳಗಾಗುವ ಹೊತ್ತಿಗೆ ಕಸ ಗುಡಿಸಿ ರಂಗೋಲಿ ಹಾಕಿ ,ಪಾತ್ರೆ ತೊಳೆಯಲು ಕೆಲಸದವಳನ್ನು ನೋಡಿಕೊಂಡಿದ್ದಾಳೆ. ಯಾಕಂದರೆ ಅನುರಾಧಾಗೆ ಎಂಟೂವರೆ ಹೊತ್ತಿಗೆ ಎಲ್ಲಾ ಕೆಲಸ ಮುಗಿದಿರಬೇಕು. ಈಗ